IJRAR.ORG E-ISSN: 2348-1269, P-ISSN: 2349-5138

INTERNATIONAL JOURNAL OF RESEARCH AND ANALYTICAL REVIEWS (IJRAR) | IJRAR.ORG

An International Open Access, Peer-reviewed, Refereed Journal

# ಕೈವಾರ ನಾರಾಯಣಪ್ಪನ ಕಾಲಜ್ಞಾನ ಪದ್ಯಗಳು

**ಅಶ್ವತ್ಥ ಎಸ್**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದೇವನಹಳ್ಳಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಕೈವಾರ ನಾರೇಯಣಪ್ಪನವರು ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲ್ಲೂಕು, ಕೈವಾರ, ಎಂಬ ಗ್ರಾಮದಲ್ಲಿ ೧೭೨೬ ರಲ್ಲಿ ಬಲಿಜ ಜನಾಂಗಕ್ಕೆ ಸೇರಿದ ಮುದ್ದಮ್ಮ ಕೊಂಡಪ್ಪ ದಂಪತಿಗಳ ಮಗನಾಗಿ ಹುಟ್ಟಿದವರು ಇವರ ಜನ್ಮನಾಮ ನಾರಾಯಣಪ್ಪ ಎಂಬುವುದು. ತಂದೆ-ತಾಯಿ ಅತ್ಯಂತ ದೈವಭಕ್ತರು ಅಮರನಾರಾಯಣಸ್ವಾಮಿಯ ಸೇವೆಯಲ್ಲಿಯೇ ತಮ್ಮ ಜೀವನದ ಸಾರ್ಥಕತೆಯನ್ನು ಕಂಡವರು ಇವರು. ಅನೇಕ ವರ್ಷಗಳ ಕಾಲ ಮಕ್ಕಳಿಲ್ಲದೇ ಪರಿತಪಿಸುತ್ತಿದ್ದರು. ನಿತ್ಯವು ಸಂತಾನಕ್ಕಾಗಿ ಶ್ರೀ ಅಮರನಾರಾಯಣನನ್ನು ಪ್ರಾರ್ಥಿಸುತ್ತಿದ್ದರು. ಅಮರನಾರೇಯಣನ ಕೃಪೆಯಿಂದ ನಾರಾಯಣಪ್ಪ ಜನಿಸಿ ಲೋಕ ಪ್ರಸಿದ್ಧನಾಗುತ್ತಾನೆ. ನಾಡಿನ ತತ್ತ್ವಪದಕಾರರ ಪರಂಪರೆಯಲ್ಲಿ ನಾರೇಯಣಪ್ಪನ ಹೆಸರು ಸುಪ್ರಸಿದ್ಧವಾಗಿದೆ. ಅನೇಕ ತತ್ತ್ವಪದಗಳು ಕಾಲಜ್ಞಾನ ಪದ್ಯಗಳು, ಶತಕ ಪದ್ಯಗಳು, ಮುಂತಾದ ಸಾಹಿತ್ಯವನ್ನು ರಚಿಸಿ ಕನ್ನಡ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ.

ತ್ರಿಕಾಲ ಜ್ಞಾನಿಗಳಾದ ಮಹಾತ್ಮರು ಒಂದು ಜನಾಂಗದ ವಿನಾಶದ ಸೂಚನೆಗಳನ್ನು ತಮ್ಮ ದಿವ್ಯದೃಷ್ಟಿಯಿಂದ ಕಂಡುಕೊಂಡು ಹೊಸದೊಂದು ಸತ್ಯಯುಗ ಬರುವುದೆಂದು ಅದಕ್ಕಾಗಿ ಪ್ರತಿಯೊಬ್ಬರೂ ಎಚ್ಚರವಾಗಿರಬೇಕೆಂದು ಭವಿಷ್ಯತ್ತಿನ ವಿಚಾರಗಳನ್ನು ಬೋಧಿಸಿದ ಸಾಹಿತ್ಯಕ್ಕೆ ಕಾಲಜ್ಞಾನ ಸಾಹಿತ್ಯ ಎನ್ನುತ್ತಾರೆ.

**"ಕಾಲಜ್ಞಾನ ಶಬ್ದವು 'ಕಾಲ' ಮತ್ತು 'ಜ್ಞಾನ' ಎಂಬ ಸಂಸ್ಕೃತ ಪದಗಳಿಂದ ಕೂಡಿದೆ 'ಕಾಲ' ಎಂದರೆ ಸಮಯ 'ಜ್ಞಾನ' ಎಂದರೆ ತಿಳುವಳಿಕೆ ಹೀಗಾಗಿ ಕಾಲಜ್ಞಾನವೆಂದರೆ ಸಮಯದ ತಿಳುವಳಿಕೆ ಎಂದು ಸ್ಪಷ್ಟವಾಗಿ ಹೇಳಬಹುದು. ಕಾಲಜ್ಞಾನವು ಯೋಗಿಗಳ ಅನುಭವದ ಮತ್ತು ತಮ್ಮ ಆಧ್ಯಾತ್ಮಿಕ ದಿವ್ಯಶಕ್ತಿಯಿಂದ ಹೊರಬಂದಿರುವ ವಾಣಿ. ಇದು ದೈವಿಶಕ್ತಿಯ ಸಂದೇಶ ಎಂಬ ಅಚಲವಾದ ನಂಬಿಕೆ ಜನರ ಮನಸ್ಸಿನಲ್ಲಿದೆ. ಇದು ಮನುಷ್ಯನನ್ನು ಯಾವಾಗಲೂ ಎಚ್ಚರದ ಸ್ಥಿತಿಯಲ್ಲಿಡಲು ಪ್ರಯತ್ನಿಸುತ್ತಿರುತ್ತದೆ. ಕಾಲಜ್ಞಾನವು ಯೋಗ ಸಿದ್ದನಾದ ತಪಸ್ವಿಯ ಮುಖದಿಂದ ವಿಶ್ವಕಲ್ಯಾಣಕ್ಕಾಗಿ ಹೊರಬೀಳುವ ದೈವವಾಣಿಯಾಗಿರುತ್ತದೆ. ಕಾಲಜ್ಞಾನಿಗೆ ಸಂಬಂಧಿಸಿದಂತೆ ಫರ್ಡಿನೆಂಡ್ ಕಿಟೆಲ್ ಅವರು ಈ ರೀತಿ ಅರ್ಥೈಸುತ್ತಾರೆ. "ಂ ಞಚಿ ಷಾಂ ಞಞ ಏಚಿಟಚಿರಿಟಚಿಚಿಟಚಿ ಖಚಿಚಿ" ಕಾಲಜ್ಞಾನಿ ಎಂದರೆ 'ಶಿವ' ಎಂದು ಅರ್ಥವಾಗುವುದರಿಂದ ಕಾಲಜ್ಞಾನ ಸಾಹಿತ್ಯವೆಂದರೆ ಶಿವಜ್ಞಾನಿಗಳಿಂದ ಹೇಳಲ್ಪಟ್ಟ ಸಾಹಿತ್ಯವೆಂದು ಅರ್ಥೈಸಬಹುದು."**

ಕೋಲಾರ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕೈವಾರ ನಾರೇಯಣಪ್ಪ ಮತ್ತು ಗಟ್ಟಹಳ್ಳಿ ಆಂಜಿನಪ್ಪನವರು ಕಾಲಜ್ಞಾನ ಸಾಹಿತ್ಯವನ್ನು ರಚಿಸಿದ್ದಾರೆ.

ಕೈವಾರ ನಾರೇಣಪ್ಪನವರ ರಚನೆಗಳಲ್ಲಿ ಕನ್ನಡ ಕೀರ್ತನೆಗಳು ಹೊರತುಪಡಿಸಿ ಉಳಿದೆಲ್ಲ ಸಾಹಿತ್ಯ ತೆಲುಗು ಭಾಷೆಯಲ್ಲಿದೆ. ಕಾಲಜ್ಞಾನ ಗ್ರಂಥದಲ್ಲಿ ನಾರೇಣಪ್ಪನವರು ಹಲವಾರು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಜಗತ್ತಿನಲ್ಲಿ ಬ್ರಿಟಿಷರ ಆಳ್ವಿಕೆ ಮತ್ತು ಅಂತ್ಯ, ಪ್ರಜೆಗಳ ಶೋಷಣೆ, ಪ್ರಕೃತಿ ಸಂಪತ್ತಿನ ನಾಶ, ಸರ್ಕಾರಗಳ ವೈಫಲ್ಯ, ಸಮಾಜದಲ್ಲಿ ಅನೈತಿಕತೆ, ಪಾಪಗಳು ಹೆಚ್ಚಾಗುವಿಕೆ, ಭವಿಷ್ಯತ್ತಿನಲ್ಲಿ ಸಂಭವಿಸುವ ಪ್ರಳಯ ಮುಂತಾದ ವಿಚಾರಗಳನ್ನು ಕುರಿತು ಭವಿಷ್ಯ ವಾಣಿಗಳಲ್ಲಿ ನುಡಿದಿದ್ದಾರೆ. ಒಟ್ಟು ನಲವತ್ತೂರು ಪದ್ಯಗಳಲ್ಲಿ ಸದ್ಗುರು ತಾತಯ್ಯನವರು ಕಾಲಜ್ಞಾನವನ್ನು ನುಡಿದಿದ್ದಾರೆ. ಕೈವಾರದ ಯೋಗಿ ನಾರೇಣಪ್ಪನವರು, ೧೮೧೩–೧೪ ಶ್ರೀಮುಖ ಸಂವತ್ಸರ ಶ್ರಾವಣ ಶುದ್ಧ ಪಂಚಮಿ ರಾತ್ರಿ ೧೨ ಗಡಿಗಳಲ್ಲಿ ಅಂದರೆ ಬೆಳಗ್ಗೆ ಮಧ್ಯರಾತ್ರಿಯ ಎರಡು ಗಂಟೆಯಲ್ಲಿ ಕಾಲಜ್ಞಾನ ರಚಿತವಾಯಿತು. ತಮ್ಮ ೮೭ ನೇ ವಯಸ್ಸಿನಲ್ಲಿ ತಮ್ಮ ದಿವ್ಯದೃಷ್ಟಿಯಿಂದ ಪರಮಾತ್ಮನ ಅನುಗ್ರಹದಿಂದ ಕಾಲಜ್ಞಾನ ಭವಿಷ್ಯವಾಣಿಯನ್ನು ಶ್ರೀಮುಖನಾಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿಯಂದು ಲೋಕಕಲ್ಯಾಣಕ್ಕಾಗಿ ಕಾಲಜ್ಞಾನ ವಾಣಿಯನ್ನು ನುಡಿದರು. ನಾರೇಣಪ್ಪನವರು ಕಾಲಜ್ಞಾನ ತಾಳೆಗರಿಗಳಲ್ಲಿ ಬರೆಯಲ್ಪಟ್ಟ ತೆಲುಗು ಭಾಷೆಯಲ್ಲಿದ್ದ 'ಪ್ರಚಂಡ ನಾರಾಯಣ ಕವಿ ಪದ್ಯಮುಲು' ಇದು ಪೂರ್ವ ಭಾಗ ಇದರಲ್ಲಿ ೧೭ ಪದ್ಯಗಳಿವೆ, 'ಕಾಲಜ್ಞಾನ ಸೂಕ್ಷ್ಮ ಭೀಮಲಿಂಗ ಶತಕಮು' ಇದರಲ್ಲಿ ೨೭ ಸೀಸ ಪದ್ಯಗಳಿವೆ.

**೧) "ಅಲ್ಪಾಯುಧಸ್ತುಲು–ಅವನಿಕಿ ದೊರಲಯಿರಿ।**

**ಭೂದೇವತಕು ಎಂತೋ–ಭಾರಮಾಯ।**

**ಮೋಯಲೇನನುಚು – ಮೊರಬೆಟ್ಟು ಚುನ್ನದಿ।**

**ನಿಂಡಾ ಪರತತ್ವ ಪ್ರಚಂಡ– ನಾರೇಯಣ ಕವಿ ॥೧॥"**

ಅಲ್ಪವಾದ ಆಯುಧಗಳನ್ನು ಹಿಡಿದು ಜನ ಇಡೀ ವಿಶ್ವದ ಪ್ರಭುಗಳಾಗಿ ಆಳುತ್ತಾರೆ. ಭೂಮಿಯ ಮೇಲೆ ಪಾಪ ಕೃತ್ಯಗಳು ಅಧರ್ಮ ಹೆಚ್ಚುವುದಕ್ಕೆ ಇವರು ಕಾರಣವಾದರು. ಇದರ ಪರಿಣಾಮ ಭೂಮಿಗೆ ಭಾರ ಹೆಚ್ಚಾಯಿತು, ಅಲ್ಪವಾದ ಆಯುಧಗಳನ್ನು ಹಿಡಿದ ಪ್ರಭುಗಳ ಆಳ್ವಿಕೆಯಲ್ಲಿ ಧರ್ಮ ನಾಶವಾಯಿತು. ಅಧರ್ಮವೂ ಪಾಪಕಾರ್ಯಗಳು ದಿನೇ ದಿನೇ ಹೆಚ್ಚಾದವು. ಇದರಿಂದ ಭೂತಾಯಿಗೆ ಅದನ್ನು ಹೊರಲು ಕಷ್ಟವಾಗುತ್ತಿದೆ ಎಂದು ತನ್ನ ಕಷ್ಟವನ್ನು ದೇವರಿಗೆ ಹೇಳಿಕೊಳ್ಳುತ್ತಿರುವುದನ್ನು ಈ ಪದ್ಯದಲ್ಲಿ ಕಾಣಬಹುದಾಗಿದೆ.

**೨) "ವಾನರುಲ ವಸುಧ – ಪಾಲನ ತೀರೇನು**

**ಇಕ ಮೀದ ಲೇದು – ವಚ್ಚೇನು ಅಂತ್ಯಂ।**

**ಪಲಾಯನ ಮೈ – ಪೋದುರು।**

**ನಿಂಡಾ ಪರತತ್ವಪ್ರಚಂಡ – ನಾರಾಯಣ ಕವಿ ॥೨॥"**

ಜಗತ್ತಿನ ಹಲವಾರು ದೇಶಗಳಲ್ಲಿ ವಸಹಾತುಗಳನ್ನು ಸ್ಥಾಪಿಸಿ ಆಳ್ವಿಕೆ ನಡೆಸಿದ ಬ್ರಿಟಿಷರ ಆಳ್ವಿಕೆ ಬಗ್ಗೆ ಇಲ್ಲಿ ತಾತಯ್ಯನವರು ಪ್ರಸ್ತಾಪಿಸುತ್ತಾರೆ. ವಾನರ ಶಬ್ದದಿಂದ ಆಂಗ್ಲರನ್ನು ಇಲ್ಲಿ ಸೂಚಿಸಿದ್ದಾರೆ ಆಂಗ್ಲರು ಭೂಮಿಯನ್ನು ಆಳುವ ಪ್ರಭುತ್ವಾಧಿಕಾರದ ಅವಧಿ ಮುಗಿದು ಹೋಗುತ್ತದೆ. ಅವರ ಆಳ್ವಿಕೆ ಇರುವುದಿಲ್ಲ ಅಂತ್ಯವೂ ಸಮೀಪಿಸಿದೆ ಅವರು ಓಡಿ ಹೋಗುತ್ತಾರೆ. ಅದರಂತೆ ಭಾರತ ದೇಶದಲ್ಲಿ ಆಂಗ್ಲ ಆಳ್ವಿಕೆ ಇದ್ದು, ಈ ಕಾಲಜ್ಞಾನ ಹೇಳಿದ ಕಾಲಕ್ಕೆ ಇತ್ತು, ೧೯೪೭ ಆಗಸ್ಟ್ ೧೫ರಂದು ಅವರ ಆಳ್ವಿಕೆ ಮುಗಿದು ಹೋಗಿ ಸ್ವದೇಶಕ್ಕೆ ಪಲಾಯನ ಮಾಡಿದರೆಂಬುದು ಶ್ರೀ ಕೈವಾರದ ನಾರೇಣಪ್ಪನವರ ಕಾಲಜ್ಞಾನವಾಣಿ ಸತ್ಯತೆಯನ್ನು ಖಚಿತಪಡಿಸುತ್ತದೆ.

**೩) "ಕುಂಟೆನ ಕಾಂಡ್ಲಕು – ಗುರ್ರಾಲು ಗೊಡಗುಲು,**
**ತೊತ್ತುಕೊಡಕುಲಕೆಲ್ಲ – ದೊರತನಂಬು।**
**ಘನ ಲಂಜಲಕು ವಕ – ಗವ್ವಪೋಕಿಯ್ಯರು,**
**ಸಂಸಾರಲಿಂಡ್ಲಲೋ – ಜಾರಸ್ತ್ರೀಲು ।**
**ಹರಿಭಕ್ತ ಅರುದಾಯ – ಆಚಾರ ಮೆಚ್ಚಾಯ,**
**ಸತಿಭಕ್ತಿಮೀದನೇ – ಚಾಲ ಮನಸು।**
**ಸ್ತ್ರೀಲ ಮಾಯಲ ಚೇತ – ಚಿಕ್ಕುಬಡಿಯೀ ಜನಲು,**
**ಚಿಂತಕುಲೋನೈರಿ – ಶಿವುನಿ ಮರಚಿ ॥**
**ಚಿನ್ನ ಬಾಲುಲ ವಿಧಮಾಯ –ಸೃಷ್ಟಿಲೋನ।**
**ಬಟ್ಟಲಡ್ಡಮು ಗಟ್ಟಿನ – ಭಾಗ್ಯಮೇಮಿ?।**
**ಅಮರನಾರೇಯಣುನಿ ಸಖ – ಹರ ಮಹಾತ್ಮ ।**
**ಅಧಿಕ ಭವಭಂಗ ಕೈವರಮು – ಭೀಮಲಿಂಗ॥೨॥"**

ವೇಶ್ಯೆಯ ಮಧ್ಯಸ್ತಿಕೆಯಿಂದ ಹಣ ಸಂಪಾದನೆ ಮಾಡಿ ಬದುಕುವ ದಲ್ಲಾಳಿಗಳಿಗೆ ಶ್ರೀಮಂತಿಕೆಯನ್ನು ತೋರಿಸುವ ಚಿಹ್ನೆಗಳಾದ ಕುದುರೆ-ಕೊಡೆಗಳು ಬರುವುವು. ತೊತ್ತು ಮಕ್ಕಳಿಗೆ ಅಂದರೆ ದಾಸಿಪುತ್ರರು ಅಥವಾ ವೇಶ್ಯ ಪುತ್ರರಿಗೆ ಪ್ರಭುಗಳಾಗಿ ಆಳುವ ಅಧಿಕಾರ ಬರುವುದು. ಸದಾ ವೇಶ್ಯಾವೃತ್ತಿ ಮಾಡಿ ಜೀವನ ನಡೆಸುವ ವೇಶ್ಯೆಯರಿಗೆ ಕವಡೆ ಪಾಲಿನ ನಾಣ್ಯವನ್ನು ಕೊಡುವವರು ಇರುವುದಿಲ್ಲ. ಕಾರಣವೆಂದರೆ ಸಂಸಾರಸ್ಥರ ಮನೆಗಳಲ್ಲಿಯೇ ಜಾರುಸ್ತ್ರಿಯರು ಸಿದ್ಧವಾಗುತ್ತಾರೆ. ಶಿವಭಕ್ತಿಯನ್ನು ಜನ ಮರೆಯುತ್ತಾರೆ. ಸಮಾಜದಲ್ಲಿ ಡಾಂಭಿಕತೆ ಹೆಚ್ಚಾಗುತ್ತದೆ. ಹೆಂಗಸರ ವಿಲಾಸ ಮಾಯೆಗಳಿಗೆ ಜನ ಮನಸೋತು ಸಿಕ್ಕಿಬಿದ್ದು, ಶಿವನನ್ನು ಮರೆಯುವುದರಿಂದ ಚಿಂತೆಗಳಲ್ಲಿ ಬಿದ್ದು ಒದ್ದಾಡುತ್ತಾರೆ. ಜಗತ್ತಿನಲ್ಲಿ ಸ್ತ್ರೀಯರು ಮತ್ತು ಪುರುಷರು ಪುಟ್ಟ ಮಕ್ಕಳಂತೆ ವರ್ತನೆ ಮಾಡುತ್ತಾರೆ. ಕೇವಲ ವ್ಯರ್ಥವಾಗಿ ದೇಹಕ್ಕೆ ಹೊದಿಸದ ಮಾತ್ರಕ್ಕೆ ಬರುವ ಭಾಗ್ಯವೇನು? ಎಂದು ನಾರೇಣಪ್ಪನವರು ಪ್ರಶ್ನಿಸುತ್ತಾರೆ.

ಪದ್ಯದ ಕೊನೆಯ ಸಾಲು ಬಟ್ಟೆಯಿಂದ ಮೈಮುಚ್ಚಿದ್ದರಿಂದ ಭಾಗ್ಯವೇನು? ಎಂಬ ಸಾಲು ಆಧುನಿಕ ಕಾಲದಲ್ಲಿ ತುಂಡು ಬಟ್ಟೆಗಳನ್ನು ಧರಿಸಿ ಜನ ನೈತಿಕ ಪಥವನ್ನು ಉಲ್ಲಂಘಿಸುವುದನ್ನು ಕಾಣಬಹುದಾಗಿದೆ.

೪) "ಎವರೈನ ಈ ಕಾಲ – ಜ್ಞಾನವಿವರಂಬಂತೆ

ಸರಿ ತಾಕದನುವಾಡು – ಚೆಡ್ಡವಾಡು।

ಪಂಚಮಿ ಚಂದ್ರನಿ ಪಕ್ಕ– ಉತ್ತರಮಂದು

ಕೊಡಿ ಮೀದ ಕೊರ್ಬುಂಡು – ಯೆದುರು ಚುಕ್ಕ।

ಆಶ್ಚರ್ಯ ಮೈತೋಚು – ಅಖಿಲ ಜನಮುಲು ಚೂಡ

ಮೇಘ ಮಂಡಲ ಮೆಲ್ಲ – ರಕ್ತಚ್ಛಾಯ।

ಪುಟ್ಟ ಪಾಪ ರೀತಿ – ಪುಟ್ಟನು ವಕ ಚುಕ್ಕ

ಅಂಗಾಂಗಮುಲು ಕೊದವ – ಲೇಕಯುಂಡು॥

ಅಪ್ಪುಡು ಸರಿ ಜೂಚಿ ಸಜ್ಜನುಲು – ಆತ್ಮಲೋನ।

ತಪ್ಪದನುಚು ತೆಲಿಯುಡೀ – ತರ್ಕಮೇಲ।

ಅಮರ ನಾರೇಯಣುನಿ ಸಖ – ಹರ ಮಹಾತ್ಮ ।

ಅಧಿಕ ಭವಭಂಗಕೈವರಮು – ಭೀಮಲಿಂಗ ॥೮॥"

ಯಾರಾದರೂ ಈ ಕಾಲಜ್ಞಾನವನ್ನು ಕುರಿತು ಅಪಹಾಸ್ಯ ಮಾಡಿದರೆ ಅವನು ನಿಜವಾಗಿಯೂ ದುಷ್ಟನಾಗಿರುತ್ತಾನೆ. ಏಕೆಂದರೆ ಇಲ್ಲಿರುವುದು ದೈವವಾಣಿ ಮುಂದೆ ಘಟಿಸುವ ಒಂದು ಸಣ್ಣ ದೃಷ್ಟಾಂತವು ಹೀಗೆ ನಡೆಯುತ್ತದೆ. ಅದೇನೆಂದರೆ, ಮುಂಬರುವ ವರ್ಷಗಳಲ್ಲಿ ಒಂದಾನೊಂದು ಪಂಚಮಿಯ ರಾತ್ರಿಯಲ್ಲಿ ಜನರೆಲ್ಲ ಗುಂಪುಕೂಡಿ ಆಶ್ಚರ್ಯದಿಂದ ಆಕಾಶದತ್ತ ನೋಡುತ್ತಿದ್ದಾಗ ಆಕಾಶದಲ್ಲಿ ಚುಕ್ಕೆಯೊಂದು ಕಾಣಿಸುತ್ತದೆ. ಚಂದ್ರನಿಗೆ ಉತ್ತರ ಪಾರ್ಶ್ವದ ತುದಿಯಲ್ಲಿ ಅಂಗಾಂಗಳ ಸಹಿತವಾಗಿ ಮೂಡುವ ಈ ಚುಕ್ಕಿಯು ಮಗುವಿನ ಆಕಾರವನ್ನು ಹೋಲುತ್ತದೆ. ಆ ಸಮಯಕ್ಕೆ ಸರಿಯಾಗಿ ಆಕಾಶ ಮಂಡಲದಲ್ಲಿ ರಕ್ತದ ಬಣ್ಣ ಹರಡಿರುತ್ತದೆ. ಕಾಲವಾಣಿ ಸತ್ಯ ಸತ್ಯೆತೆಗೆ ಇದೇ ಸಾಕ್ಷಿ ಎನ್ನುತ್ತಾರೆ ಕೈವಾರದ ತಾತಯ್ಯನವರು.

೫) "ಘಮುಲು ಘಮುಲ್ಮೈ ತಿರುಗು – ಘೂಕಮುಲ್ ನಡುರಾತ್ರಿ ।

ವಿಂತ ವಿಂತಲ ಕೂತ – ಲಿಂಡ್ಲುಮೀದ ।

ಕನ್ನೀಳ್ಳು ಕಾರ್ಚುಭುವಿ – ಕಾಮಧೇನುವು ಲನ್ನಿ ।

ತಲವಾಚುಕೊನಿಕಾಳ್ಳು – ತತ್ತರಿಂಚು ।

ಕಡು ಕ್ರೂರ ಚಿತ್ತುಲೈ – ಕಲಹಿಂತುರೇವೇಳ

ಅನ್ನ ತಮ್ಮುಲು ತಲ್ಲಿ –ತಂಡ್ರಿ–ಸುತುಲು।

ಆತ್ಮಮಂಡಲಮಂದು – ಅನ್ನಿ ಪ್ರಕಾಶಮ್ಮೈ

ಭಕ್ಷಿಂಚಿನಪ್ಪುಡೇ – ಭಸ್ಮಮವುನು॥

ಹೇಷ್ಯಕಾಲಮು ವಚ್ಚುಟಕು – ಹೇತುವನುಚು।

ಚೂಡವಲೆನಯ್ಯ ಸುಜ್ಞಾನ – ಚೂಟಿಪರುಲು ।

ಅಮರ ನಾರೇಯಣುನಿ ಸಖ – ಹರ ಮಹಾತ್ಮ ।

**ಅಧಿಕ ಭವಭಂಗ ಕೈವರಮು – ಭೀಮಲಿಂಗ ॥೬॥"**

ಮುಂದೆ ಘಟಿಸಲಿರುವ ಕೇಡುಗಾಲದ ಮುನ್ಸೂಚನೆಯಾಗಿ ಲೋಕದಲ್ಲಿ ಕೆಲವು ಅವಲಕ್ಷಣಗಳು ಕಾಣಿಸಿಕೊಳ್ಳುತ್ತವೆ ಅವು ಹೀಗಿವೆ.

ಗೂಬೆಗಳು ಗುಂಪುಗುಂಪಾಗಿ ಊರುಗಳಲ್ಲಿ ಸಂಚರಿಸುತ್ತಾ ಕಿರಿಚಾಡುತ್ತವೆ, ಮನೆಗಳ ಮೇಲೆ ವಿಚಿತ್ರವಾದ ವಿಕಾರ ಧ್ವನಿ ಕೂಗುಗಳು ಕೇಳಿಸುತ್ತದೆ. ನೋಡು ನೋಡುತ್ತಿದ್ದಂತೆ ಹಸುಗಳು ಕಣ್ಣೀರು ಸುರಿಸುತ್ತಾ ತಲೆ ಊದಿಕೊಂಡು ನೆಲಕ್ಕೆ ಬಿದ್ದು ಕಾಲುಗಳನ್ನು ಬಡಿಯುತ್ತಾ ಒದ್ದಾಡುತ್ತವೆ. ಕುಟುಂಬಗಳಲ್ಲಿ ಅಣ್ಣ ತಮ್ಮಂದಿರು ತಂದೆ ತಾಯಿಗಳು ಮತ್ತು ಮಕ್ಕಳು ಅತ್ಯಂತ ಕ್ರೂರವಾಗಿ ಸದಾ ಜಗಳವಾಡುತ್ತಾರೆ ದೇಹದಲ್ಲಿ ಧಗಧಗನೆ ಬೆಂಕಿಯ ಜ್ವಾಲೆ ಉರಿಯುತ್ತದೆ ಇದರಿಂದ ತಿಂದ ಆಹಾರ ತಿಂದ ಕೂಡಲೇ ಭಸ್ಮವಾಗಿ ಹೋಗುವುದು. ಎಷ್ಟೇ ಆಹಾರ ತಿಂದರು ಹಸಿವು ನೀಗುವುದಿಲ್ಲ ಎಂದು ತಾತಯ್ಯನವರು ಕಾಲಜ್ಞಾನದಲ್ಲಿ ಹೇಳುತ್ತಾರೆ.

**೭) "ಧನಪತಿ ದೇಶಮುನ – ದೈವಯೋಗಮು ಚೇತ**

**ಮೊಗಲಾಯಿ ವಂಶಮುನ – ಮೇಟಿ ಪ್ರಭುವು।**

**ಜನನಮ್ಮೆ ಜಗಮೆಲ್ಲ –ಏಕ ಚಕ್ರಂಬುಗಾ**

**ಪಾಲಿಂಪುಚುನ್ನಾಡು – ಪ್ರಜಲನೆಲ್ಲ ।**

**ಗುತ್ತಪುಟ್ಟಕಿ ಮೂಡ – ಕೋರು ಮೂಡು ಪಾಳ್ಳು**

**ಕಾಪುಲ ನಿರ್ಣಯಂ – ಕಡಪರೊಕ।**

**ನೆಲ ಮೂಡು ವರ್ಷಾಲು ತಪ್ಪಕ ವರ್ಷಿಂಚು**

**ಪೈರು ಪಂಟಲು ಲೆಸ್ಸ – ಪ್ರಬಲಮವುನು ॥**

**ಸಕಲ ಜನಮುಲು ಸಂತತಾ – ನಂದುಲುಗುಚು।**

**ಚೆಲಗು ಚುಂದುರು ಸುಜ್ಞಾನ – ಚರ್ಯಲಂದು।**

**ಅಮರನಾರೇಯಣುನಿ ಸಖ –ಹರ ಮಹಾತ್ಮ ।**

**ಅಧಿಕ ಭವಭಂಗ, ಕೈವರಮು – ಭೀಮಲಿಂಗ. ॥೧೨॥"**

ಮುಂದೆ ಜಗತ್ತಿನಲ್ಲಿ ಸುಖ ಶಾಂತಿ ನೆಮ್ಮದಿ ಸಂತೋಷಗಳ ಸುಭಿಕ್ಷ ಕಾಲ ಬರುತ್ತದೆ ಎಂದು ತಾತಯ್ಯನವರು ಈ ಪದ್ಯದಲ್ಲಿ ಉಲ್ಲೇಖಿಸುತ್ತಾರೆ. ಇಡೀ ಅಖಂಡ ಪ್ರಪಂಚವನ್ನು ಒಟ್ಟುಗೂಡಿಸಿ ಏಕ ಚಕ್ರಾಧಿಪತ್ಯದ ವ್ಯಾಪ್ತಿಯಲ್ಲಿ ಆಳುವಂತಹ ದೈವಾಂಶದ ಮಹಾಪುರುಷನು ಪ್ರಭುವಾಗಿ ಆಳ್ವಿಕೆ ಮಾಡುತ್ತಾನೆ. ಆತನು ಧನಪತಿ ಎಂಬ ದೇಶದ ಮೊಗಲಾಯಿ ವಂಶಜನೆಂದು ಕಾಲಜ್ಞಾನದಲ್ಲಿ ಹೇಳಲಾಗಿದೆ. ಕಾಲಜ್ಞಾನದ ಪ್ರಕಾರ ತಾತಯ್ಯನವರು ಹೇಳಿರುವಂತೆ ಉತ್ತರ ದಿಕ್ಕಿನಲ್ಲಿರುವ ದೇಶವಾಗಿದೆ ಈತನ ಆಳ್ವಿಕೆಯು ಧರ್ಮದಿಂದ ಕೂಡಿರುತ್ತದೆ. ಕಾಲಕಾಲಕ್ಕೆ ಮಳೆ ಬೆಳೆಗಳು ಚೆನ್ನಾಗಿ ಆಗುತ್ತವೆ, ಬೆಳೆಯು ಭೂಮಿಯ ಗುತ್ತಿಗೆದಾರರಿಗೂ, ಗೇಣಿದಾರರಿಗೂ ಮತ್ತು ಭೂ ಮಾಲೀಕರಿಗೂ ಲಾಭವಾಗುವಂತೆ ನ್ಯಾಯಯುತವಾಗಿ ಫಸಲುಗಳು ಹಂಚಿಕೆಯಾಗುತ್ತದೆ. ಗುತ್ತಿಗೆಯಲ್ಲಿ ಬೆಳೆಯ ಎಂಟನೆಯ ಭಾಗ ಮಾತ್ರ ತೀರ್ಮಾನಿಸಲ್ಪಡುತ್ತದೆ. ರೈತರು ಗೇಣಿ ವಿಧಾನದಲ್ಲಿ ಮುಕ್ಕಾಲು ಭಾಗದಷ್ಟು ಫಲವನ್ನು ಪಡೆಯುತ್ತಾರೆ. ಭೂ

ಮಾಲೀಕರಿಗೆ ಕೊನೆಯ ಕಾಲು ಭಾಗ ಹೋಗುತ್ತದೆ. ಜನರು ತತ್ವಚಿಂತನೆಗಳಲ್ಲಿ ವಿದ್ಯೆ, ಕಲೆ ಮೊದಲಾದ ಧರ್ಮ ಕಾರ್ಯಗಳಲ್ಲಿ ಆತ್ಮಕಲ್ಯಾಣ ಮತ್ತು ಲೋಕಕಲ್ಯಾಣದ ಚಟುವಟಿಕೆಗಳಲ್ಲಿ ತೊಡಗುತ್ತಾರೆ ಎಂದು ಹೇಳಲಾಗಿದೆ.

**೭) "ನಾಲ್ಗಿಂಟವಕ ಪಾಲು – ಧರದತ್ತಮಯಿಪೋವು**

**ಪಸುಲ ಮೇತ ಭೂಮಿ – ಪಂಟಲೇದು।**

**ಅವನಿಲೋ ಘಡಿಘಡಿಕಿ – ಪಂಟ ಲೇದು।**

**ಸೆಲವವುನು ಸರಕಾರು – ಧಾನ್ಯಮೆಲ್ಲ।**

**ಭಟುಲು ಭಾಗವತುಲು – ಬಹುಯೋಧ ಕವುಲಕು**

**ಸಪ್ತಾಂಗ ಮುಲುಯಿಚ್ಚು – ಚಾಲ ಮೆಚ್ಚಿ ।**

**ನಾಲ್ಗೋ ವೇದಾಕ್ಷರಮು – ನರುಲು ಪಠಿಯಿಂಚರು**

**ಪಠಿಯಿಂಚಿನಾಗಾಗಿ – ಪಾಟಿಲೇದು ।**

**ನಾಲ್ಗು ಪಾದಮುಲು ಧರ್ಮಮು – ನಡುಚುಯಿಲನು।**

**ಮಾರಿ ಮಂದುಲ ರೋಗಾಲು – ಮಾಯಮವುನು॥**

**ಅಮರ ನಾರೇಯಣುನಿ ಸಖ – ಹರ ಮಹಾತ್ಮ ॥**

**ಅಧಿಕ ಭವಭಂಗ, ಕೈವರಮು – ಛೀಮಲಿಂಗ"॥೧೭॥**

ಮುಂಬರುವ ದಿನಗಳಲ್ಲಿ ಪ್ರಭುವಿನ ಆಳ್ವಿಕೆಯ ಕಾಲಘಟ್ಟದಲ್ಲಿ ದನ ಕರುಗಳು ಮುಂತಾದ ಪಶುಗಳ ಮೇವಿಗೋಸ್ಕರ ಹುಲ್ಲು ಮೈದಾನಗಳು ಮೀಸಲು ಇರುವುದು, ಅಂದರೆ ಬೇಸಾಯಕ್ಕೆ ಬಳಸುವ ಬಟ್ಟ ಭೂಮಿಯಲ್ಲಿ ನಾಲ್ಕನೇ ಒಂದು ಭಾಗ ದನ ಕರುಗಳಿಗಾಗಿ ಕಡ್ಡಾಯವಾಗಿ ಮೀಸಲಾಗಿ ಇಡಲಾಗುತ್ತದೆ. ಸರ್ಕಾರಕ್ಕೆ ರೈತರು ಕೊಡಬೇಕಾದ ಆಹಾರ ಧಾನ್ಯಗಳನ್ನು ಅನ್ನವ್ರತಗಳ ದಾಸೋಹಕ್ಕೆ ಬಳಸಲಾಗುತ್ತದೆ. ಸಾಮ್ರಾಜ್ಯದ ಉದ್ದಕ್ಕೂ ಭೋಜನಾ ಶಾಲೆಗಳಿರುತ್ತವೆ ಗಡಿಯಲ್ಲಿ ಶೌರ್ಯವಂತ ಸೈನಿಕರಿದ್ದು ಅವರು ಪ್ರಭುವಿನಿಂದ ಗೌರವಿಸಲ್ಪಡುತ್ತಾರೆ. ಅಷ್ಟು ಅಲ್ಲದೆ ರಾಜ್ಯದಲ್ಲಿ ಕವಿಗಳಿಗೆ ವಿಶೇಷ ಗೌರವ ಸ್ಥಾನಮಾನಗಳಿರುತ್ತವೆ. ನಾಲ್ಕನೇ ವೇದವಾದ ಅಥರ್ವಣ ವೇದವನ್ನು ಪಠಿಸುವುದಿಲ್ಲ ರಾಜ್ಯದಲ್ಲಿ ಯಾವುದೇ ರೋಗ-ರುಜಿನುಗಳಿಲ್ಲದೆ ಜನರ ಸುಖ ಸಂತೋಷದಿಂದ ಬಾಳುವರು ಎಂಬುದು ಕೈವಾರ ನಾರೇಣಪ್ಪನ ಪ್ರಸ್ತುತ ಕಾಲಜ್ಞಾನ ಪದ್ಯದಲ್ಲಿ ಹೇಳುತ್ತಾರೆ.

ಒಟ್ಟಾರೆ ಕೈವಾರ ನಾರೇಯಣಪ್ಪನವರು ತಮ್ಮ ಅಪಾರ ಅಧ್ಯಾತ್ಮಿಕ ಅನುಭವ ಮತ್ತು ದಿವ್ಯದೃಷ್ಟಿಯಿಂದ ಭವಿಷ್ಯತ್ತಿನಲ್ಲಿ ಸಂಭವಿಸಬಹುದಾದ ಹಲವಾರು ಘಟನೆಗಳನ್ನು ಕುರಿತು ಕಾಲಜ್ಞಾನ ನುಡಿದಿದ್ದಾರೆ, ಮುಖ್ಯವಾಗಿ ಕಲಿಯುಗದಲ್ಲಿ ಮೋಸ, ವಂಚನೆ, ಅನೈತಿಕತೆ, ಅಪ್ರಮಾಣಿಕತೆ, ಅನ್ಯಾಯ, ಅಧರ್ಮ ಮುಂತಾದವುಗಳು ಹೆಚ್ಚಾಗಿ ಕಲಿಯುಗ ಅಂತ್ಯವಾಗುವ ಸೂಚನೆಯನ್ನು ಕೈವಾರ ನಾರೇಯಣಪ್ಪನವರು ನೀಡುತ್ತಾರೆ. ಅನಂತರ ಸತ್ಯಯುಗ ಪ್ರಾರಂಭವಾಗಿ ಜಗತ್ತಿನಾದ್ಯಂತ ಸುಖ, ಶಾಂತಿ, ನೆಮ್ಮದಿ, ಸಂತೋಷಗಳ, ಸುಭೀಕ್ಷೆ ಕಾಲ ಬರುತ್ತದೆ. ರಾಜ ನಿಷ್ಪಕ್ಷಪಾತವಾಗಿ ಆಳ್ವಿಕೆ ನಡೆಸುತ್ತಾನೆ. ರಾಜ್ಯದಲ್ಲಿ ಕವಿಗಳಿಗೆ ವಿಶೇಷ ಸ್ಥಾನಮಾನ ಇರುತ್ತದೆ, ರಾಜ್ಯದಲ್ಲಿ ಯಾವುದೇ ರೋಗ-ರುಜುನುಗಳು ಇಲ್ಲದೇ ಜನರು ಸುಖ ಸಂತೋಷದಿಂದ ಬಾಳುತ್ತಾರೆ ಎಂದು ಕೈವಾರ ನಾರೇಯಣಪ್ಪನವರು ತಮ್ಮ ಅಮೂಲ್ಯವಾದ ಕಾಲಜ್ಞಾನ ಸಾಹಿತ್ಯವನ್ನು ರಚಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು**


1. ಶ್ರೀ ಕೈಪು ಲಕ್ಷ್ಮೀ ನರಸಿಂಹಶಾಸ್ತ್ರೀ – ಕಾಲಜ್ಞಾನ – ಭವಿಷ್ಯವಾಣಿ ಸದ್ಗುರು ಶ್ರೀ ಯೋಗಿ ನಾರೇಯಣ ಮಠ, ಶ್ರೀ ಕ್ಷೇತ್ರ ಕೈವಾರ.
2. ಶ್ರೀಮತಿ. ಜ್ಯೋತಿ ಬಂ ಕೌಲಗಿ – ವಿಜಯಪುರ ಜಿಲ್ಲೆಯ ತತ್ತ್ವಪದ'ಕಾರರು ಒಂದು ಅಧ್ಯಯನ ಪಿಹೆಚ್.ಡಿ ಮಹಾಪ್ರಬಂಧ (ಅಪ್ರಕಟಿತ) ಗುಲ್ಬರ್ಗ ವಿಶ್ವವಿದ್ಯಾನಿಲಯ, ಗುಲ್ಬರ್ಗ.
3. ಜಯಮಂಗಳ ಚಂದ್ರಶೇಖರ – ಕೈವಾರ ನಾರೇಯಣಪ್ಪ ಮತ್ತು ಇತರರ ತತ್ತ್ವಪದ'ಗಳು.
4. ಪ್ರೊ ಕಾಳೇಗೌಡ ನಾಗವಾರ, ಜಿ.ವಿ ಆನಂದ ಮೂರ್ತಿ – ಹಲವು ತೋಟದ ಹೂಗಳು ಜನಪದ ತತ್ತ್ವಪದ'ಗಳ ಪ್ರಾತಿನಿಧಿಕ ಸಂಕಲನ.
5. ನಟರಾಜ್ ಬೂದಾಳ – ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಯ ತತ್ತ್ವಪದ'ಕಾರರು.